# ಮಜಾ ಮನೆಯಲ್ಲಿ ಮೀನು ಮಿರ್ಚಿ

ಕೆಲವು ಧಾರಾವಾಹಿಗಳು ಮನರಂಜನೆಯ ಮಹಾಪೂರವನ್ನೇ ಹೊತ್ತು ತರುತ್ತವೆ. ಇತ್ತೀಚಿನ ದಿನಗಳಲ್ಲಿ ಪರಿಪೂರ್ಣ ಕುಟುಂಬಕ್ಕೆ ಮನರಂಜನೆಯ ವಿಟಮಿನ್ ಆಗಿ ಪರಿಣಮಿಸುತ್ತಿರುವ ಧಾರಾವಾಹಿ ಮಂಗ್ಳೂರ್ ಹುಡ್ಗಿ ಹುಬ್ಳಿ ಹುಡ್ಗ.



## ಕಥಾವಸ್ತು

ಮಂಗಳೂರಿನ ಹುಡುಗಿಯ ಕುಟುಂಬ ಹಾಗೂ ಹುಬ್ಬಳ್ಳಿ ಹುಡುಗನ ಕುಟುಂಬ ಬೆಂಗಳೂರಿನ ಒಂದೇ ಬಾಡಿಗೆ ಮನೆಯಲ್ಲಿ ವಾಸವಾಗುವ ಅನಿವಾರ್ಯ ಪರಿಸ್ಥಿತಿ ಎದುರಾಗುತ್ತದೆ. ಈ ಎರಡೂ ಕುಟುಂಬಗಳ ಮಧ್ಯೆ ಭಾಷೆ, ಆಚಾರ, ವಿಚಾರಗಳ ವಿಷಯದಲ್ಲಿ ನಡೆಯುವ ಗೊಂದಲಗಳೇ ಈ ತಮಾಷೆ ಧಾರಾವಾಹಿಯ ಕಥಾವಸ್ತು.

'ಎರಡು ಬೇರೆ ಬೇರೆ ಕಲ್ಚರ್, ಟೇಸ್ಟ್‌ಗಳಿರೋ ಮಂಗಳೂರು ಹಾಗೂ ಹುಬ್ಳಿ ಫ್ಯಾಮಿಲಿಗಳು ಬೆಂಗ್ಳೂರಲ್ಲಿ ಒಂದೇ ಮನೇಲಿದ್ರೆ ಏನಾಗುತ್ತೆ ಅನ್ನೋ ಕಾಮಿಡಿ ಕತೆಯೇ ಮಂಗ್ಳೂರ್ ಹುಡ್ಗಿ ಹುಬ್ಳಿ ಹುಡ್ಗ' ಎನ್ನುತ್ತಾರೆ ನಿರ್ದೇಶಕ ತೇಜಸ್ವಿ.

'ಮಂಗ್ಳೂರ್ ಫ್ಯಾಮಿಲಿಲಿ ಒಬ್ಳು ಬ್ಯೂಟಿಫುಲ್ ಅಮೂಲ್ಯ, ಹುಬ್ಳಿ ಕುಟುಂಬದಲ್ಲಿ ಒಬ್ಬ ಹ್ಯಾಂಡ್ಸಮ್ ಅನಿರುದ್ಧ. ಇಬ್ರಿಗೂ ಒಂದೇ ಆಫೀಸ್‌ನಲ್ಲಿ ಕೆಲಸ. ಅವ್ನು ಬಾಸು, ಇವ್ಳು ಇಂಟರ್ನಿ. ಇಬ್ರೂ ಒಂದೇ ಮನೇಲಿರೋದು ಅನಿಗ್ ಗೊತ್ತು, ಅಮೂಲ್ಯಂಗೆ ಗೊತ್ತಿಲ್ಲ.

ಏತನ್ಮಧ್ಯೆ ಮೊದಲ್ನೇ ನೋಟಕ್ಕೇ ಅನಿರುದ್ಧಂಗೆ ಅಮೂಲ್ಯ ಮೇಲೆ ಲವ್ ಆಗೋಗಿರುತ್ತೆ. ಅವ್ಳೋ ಬಡಾಪೆಟ್ಟಿಗೆ ಬಗ್ಗೋಳಲ್ಲ. ಮಾತು ಮಾತಿಗೂ ಮೆಣಸಿನ್ ಕಾಯಿ ಅರೆಯೋಳು. ಆದ್ರೂ ಹಿಂಗಾಗಿ ಹಂಗಾಗಿ ಹೆಂಗೆಂಗೋ ಆಗಿ ಅವ್ಳೂ ಲವ್ವಲ್ಲಿ ಬಿದ್ದೋಗ್ತಾಳೆ. ಹುಡ್ಗೀರೇ ಹಾಗಲ್ವ? ಈಗ ಫಜೀತಿ ಅಂದ್ರೆ, ತಾವಿಬ್ರೂ ಒಂದೇ ಸೂರಲ್ಲಿರೋದು ಅಂತ ಅನಿರುದ್ಧ ಹೇಳೋ ಹಾಗಿಲ್ಲ. ಗೊತ್ತಾದ್ರೆ ಲವ್ ಬ್ರೇಕ್ ಆಗತ್ತೆ. ಹೇಳ್ದೇ ಇರೋ ಹಾಗಿಲ್ಲ. ಯಾಕೆಂದ್ರೆ ಹುಬ್ಳಿ ಅಮ್ಮ ಬೇರೆ ಹುಡ್ಗಿ ಫಿಕ್ಸ್ ಮಾಡ್ಕೊಂಡ್ ಕೂತಿದಾಳೆ.

ಈ ಕಡೆ ಅಮೂಲ್ಯಂಗೂ ಅಪ್ಪ–ಅಮ್ಮನ್ ಹತ್ರ ಲವ್ ಮ್ಯಾಟ್ರ್ ಹೇಳೋಕೆ ಆಗ್ತಿಲ್ಲ. ಹಿಂಗೆ ಫಜೀತಿ ಪಡ್ತಿರೋ ಲವ್ ಬರ್ಡ್ಸ್ ಜರ್ನಿ.. ಏನೇನ್ ಟ್ವಿಸ್ಟ್ ಪಡ್ಕೊಳತ್ತೋ.. ನೋಡಿ' ಎನ್ನುತಾರೆ ಧಾರಾವಾಹಿಗೆ ಚಿತ್ರಕತೆ ಸಂಭಾಷಣೆ ಬರೆಯುತ್ತಿರುವ ನಟ ಸುಂದರ್.




ಸೋಮವಾರದಿಂದ ಶನಿವಾರ
ರಾತ್ರಿ 7:30ಕ್ಕೆ
colors
SUPER


ಪ್ರೇಮ ಮತ್ತು ತಮಾಷೆ ಹದವಾಗಿ ಬೆರೆತ ಕಥಾನಕದಲ್ಲಿ ನಾಯಕ ನಾಯಕಿಯರಾಗಿ ವಿಜಯ್ (ಅನಿರುದ್ಧ) ಮತ್ತು ರಾಧಿಕಾ (ಅಮೂಲ್ಯ) ಅಭಿನಯಿಸುತ್ತಿದ್ದಾರೆ.

ನಾಯಕ ನಾಯಕಿ ನಡುವಿನ ಸರಸಮಯ ಸಮರವು ಈ ಮುದ್ದಿನ ಜೋಡಿಯ ಜನಪ್ರಿಯತೆ ಹೆಚ್ಚಿಸಿದೆ.

ಮುಖ್ಯ ಭೂಮಿಕೆಯಲ್ಲಿ ಹಿರಿಯ ನಟರಾದ ರಮೇಶ್ ಭಟ್, ಗಿರಿಜಾ ಲೋಕೇಶ್, ಧರ್ಮೇಂದ್ರ ಅರಸ್, ಜಯಲಕ್ಷ್ಮಿ ಪಾಟೀಲ್ ಜೊತೆಗೆ ಸುಂದರ್, ಶೋಭರಾಜ್, ಸೌಮ್ಯ, ಹುಬ್ಳಿ ಮಂಜುಳಾ, ಉಷಾ, ಮಜಾ ಟಾಕೀಸ್ ರೆಮೋ, ಮತ್ತು ಇತರರು ಇದ್ದಾರೆ.

ಲೋಕೇಶ್ ಪ್ರೊಡಕ್ಷನ್ಸ್ ನಿರ್ಮಿಸುತ್ತಿರುವ ಧಾರಾವಾಹಿ ಮಂಗ್ಳೂರ್ ಹುಡ್ಗಿ ಹುಬ್ಳಿ ಹುಡ್ಗ. ಈಗಾಗಲೇ ಮಜಾ ಟಾಕೀಸ್ ಕಾರ್ಯಕ್ರಮದಿಂದ ದೊಡ್ಡ ಹೆಸರು ಗಳಿಸಿರುವ ಈ ನಿರ್ಮಾಣ ಸಂಸ್ಥೆ ಈ ರೋಮ್ಯಾಂಟಿಕ್ ಕಾಮಿಡಿಯನ್ನು ಕಿರುತೆರೆಗೆ ತರುತ್ತಿದೆ. ಕನ್ನಡದಲ್ಲಿ ಮೊದಲ ಬಾರಿಗೆ ಕಾಮಿಡಿಯ ಜೊತೆ ಪ್ರಣಯವನ್ನು ಒಳಗೊಂಡ ಧಾರಾವಾಹಿಯ ಪ್ರಯೋಗವಾಗುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ.

ನಾಗೇಂದ್ರ ಛಾಯಾಗ್ರಹಣ, ಕೃಷ್ಣ ಸಂಕೀಘಟ್ಟ ಸಂಕಲನ ಮತ್ತು ವಿ. ಮನೋಹರ್ ಸಂಗೀತವಿದೆ.